OS No.92/2023
PW-3

(ದಿನಾಂಕ 10-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಜಿ.ಎನ್ ವಕೀಲರಿಂದಃ-**

1. ಉಳುಮೆ ಮಾಡುವ ಸಮಯದಲ್ಲಿ ಶಿವಣ್ಣ ಇವರು ಗಲಾಟೆ ಮಾಡಿದ್ದರಿಂದ ಈ ದಾವೆಯನ್ನು ವಾದಿ ದಾಖಲಿಸಿದ್ದಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ನನಗೂ ಸಹ ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳಿ ಬರೆಸಿರುತ್ತೆನೆ. ಪ್ರತಿವಾದಿಯರು ನನಗೂ ತೊಂದರೆ ಕೊಟ್ಟ ಬಗ್ಗೆ ನಾನು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಲ್ಲ. ಕಮಲಮ್ಮ ಇವರ ಜಮೀನನ್ನು ನೀವೇ ಸಾಗು ಮಾಡುತ್ತೀರಿ ಅಂದರೆ ಸಾಕ್ಷಿಯು ನಾನು ಅವರ ಜಮೀನಿಗೆ ಕೂಲಿ ಕೆಲಸಕ್ಕೆ ಹೋಗುತ್ತೇನೆ ಎನ್ನುತ್ತಾರೆ. ಸದರಿ ಜಮೀನಿನಲ್ಲಿ ಕಮಲಮ್ಮ ಇವರು ಬೆಳೆಯನ್ನು ತೆಗೆದುಕೊಳ್ಳುತ್ತಿದ್ದಾರೆ ಅಂದರೆ ಸರಿ. ಕಮಲಮ್ಮ ಇವರು ಸಾಗು ಮಾಡುವ ಜಮೀನು ಬೀಳು ಇರುವುದಿಲ್ಲ.

2. ವಾದಿಯು ನಮ್ಮ ಗ್ರಾಮದಲ್ಲಿ ಸೇಟ್ ಇವರಿಗೆ ಒಂದು ಜಾಗ ಮಾರಾಟ ಮಾಡಿದ್ದಾರೆ ಆ ವಿಚಾರ ನನಗೆ ಗೊತ್ತಿಲ್ಲ. ಕಮಲಮ್ಮ ಇವರ ಗಂಡ ದ್ಯಾಮಪ್ಪ ಮತ್ತು ಶಿವಪ್ಪ ಇವರ ತಂದೆ ಹನುಮಂತಪ್ಪ ಇವರು ಯಾವ ದಾಖಲೆಯ ಅಧಾರದ ಮೇಲೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಅಸ್ತಿಗಳ ಸರ್ವೆ ನಂಬರು, ವಿಸ್ತೀರ್ಣ ಮತ್ತು ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ಕಮಲಮ್ಮ ಇವರ ಜಮೀನನ್ನು ನಾನೇ ಸಾಗು ಮಾಡುತ್ತಿರುವುದರಿಂದ ಅದರಿಂದ ನನಗೆ ಹೆಚ್ಚಿನ ಲಾಭ ಬರುವುದರಿಂದ ಕಮಲಮ್ಮ ಇವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ಕಮಲಮ್ಮ ಇವರು ಈಗ ಸುಮಾರು 5 ವರ್ಷಗಳ ಹಿಂದೆ ಶಿವಪ್ಪ ಇವರ ವಿರುದ್ಧ ದೂರು ನೀಡಿದ್ದಾರೆ. ಉಳುಮೆ ಮಾಡುವ ಸಮಯದಲ್ಲಿ ಜಗಳ ಮಾಡಿದ್ದರಿಂದ ಅವರು ಆ ದೂರನ್ನು ನೀಡಿರುತ್ತಾರೆ. ಕಮಲಮ್ಮ ಇವರು ನಮ್ಮ ಗ್ರಾಮದಲ್ಲಿ ಸೇಟ್ ಇವರಿಗೆ ಒಂದು ಸೈಟನ್ನು ಮಾರಾಟ ಮಾಡಿದರು ಅದಕ್ಕೆ ಶಿವಪ್ಪ ಇವರು ಪಂಚಾಯತಿಯಲ್ಲಿ ತಕರಾರು ಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲಲ. ಆ ಕಾರಣದಿಂದಾಗಿ ಖರೀದಿದಾರರು ಕಮಲಮ್ಮ ಇವರಿಗೆ ದುಡ್ಡು ವಾಪಸ್ಸು ಕೊಡಿ ಎಂದು ಕೇಳಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದಾಗಿ ಶಿವಪ್ಪನ ಮೇಲೆ ಈ ದಾವೆಯನ್ನು ದಾಖಲಿಸಿ ಅವನ ಮೇಲೆ ಒತ್ತಡವನ್ನು ವಾದಿ ತಂದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ.

4. ಕಮಲಮ್ಮ ಇವರಿಗೆ ಯಾವ ಅಧಾರದ ಮೇಲೆ ಯಾವ ವರ್ಷ ದಾವಾ ಜಮೀನುಗಳು ಖಾತೆ ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ.ನನಗೆ ಈ ದಾವೆಯ ಬಗ್ಗೆ ದಾವಾ ಅಸ್ತಿಯ ಬಗ್ಗೆ ಮತ್ತು ವಾದಿ ಪ್ರತಿವಾದಿಯರ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ಅವರ ನಡುವೆ ನಡೆದಿರುವಂತಹ ವ್ಯಾಜ್ಯಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಆದರೂ ಸಹ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ